ಎಲ್ಲಾ ಸರಕುಸರಂಜಾಮು ರೆಡಿ ಇದ್ದಿದ್ದರಿಂದ ಅಕ್ಕಯ್ಯಮ್ಮ ಹದಿನೈದಿಪ್ಪತ್ತು ನಿಮಿಷದಲ್ಲಿ ಈರುಳ್ಳಿ, ಮೆಣಸಿನಕಾಯಿ, ಕೊತ್ತಂಬರಿಸೊಪ್ಪು ಹೆಚ್ಚಿಕೊಂಡು ಸ್ಟೌ ಹತ್ತಿಸಿಯೇ ಬಿಟ್ಟಿದ್ದಳು. ಒಂದೊಂದು ಸಾರಿಗೆ ಹೆಂಚಿನ ಮೇಲೆ ಮೂರು ಮೂರು ಆಮ್ಲೇಟ್ ರೆಡಿಯಾಗುತ್ತಿದ್ದವು. ಕಾಲು ಗಂಟೆಯಲ್ಲಿ ಇಪ್ಪತ್ತು ಆಮ್ಲೇಟ್ ಹಾಕಿ ಎಲ್ಲರನ್ನೂ ಕಳುಹಿಸಿದ್ದಳು. ಅಕ್ಕಯ್ಯಮ್ಮನ ಮನೆಯ ಬಾಗಿಲ ಮೇಲೆ ಹೈಸ್ಕೂಲಿಗೆ ಹೋಗುವ ತಿಪ್ಪೇರಂಗಪ್ಪನ ಮಗ ವಿಜಯಣ್ಣನು ಬಣ್ಣದ ಸೀಮೆಸುಣ್ಣದಲ್ಲಿ 'ಅಕ್ಕಯ್ಯಮ್ಮನ ಆಮ್ಲೇಟ್ ಅಂಗಡಿ', '1 ಆಮ್ಲೇಟ್ 10 ರೂಪಾಯಿ', 'ಸಾಲ ಕೇಳಿ ಸ್ನೇಹ ಕಳೆದುಕೊಳ್ಳಬೇಡಿ' ಎಂದು ಮೂರು ಸಾಲುಗಳನ್ನು ಕಣ್ಣಿಗೆ ಎದ್ದು ಕಾಣುವಂತೆ ಬರೆದಿದ್ದ. ಏಳನೇ ಕ್ಲಾಸಿನವರೆಗೂ ಓದಿ ಅಷ್ಟಿಷ್ಟು ಓದಲು ಬರುತ್ತಿದ್ದ ಅಕ್ಕಯ್ಯಮ್ಮ ತನ್ನ ಮನೆಯ ಬಾಗಿಲಿನಲ್ಲಿ ಪ್ರತ್ಯಕ್ಷವಾದ ಆ ಅಕ್ಷರಗಳನ್ನು ಕಣ್ತುಂಬಿಕೊಂಡು ತುಂಬಾನೆ ಖುಷಿಯಾಗಿ ವಿಜಯಣ್ಣನಿಗೆ ಪ್ರೀತಿಯಿಂದ ಒಂದು ಬಿಸಿಬಿಸಿ ಆಮ್ಲೇಟನ್ನು ಬಹುಮಾನವಾಗಿ ಕೊಟ್ಟಿದ್ದಳು. ಆವೊತ್ತು ಸಂಜೆ ಏಳು ಗಂಟೆಗೆ ಅಂಗಡಿ ಕ್ಲೋಸ್ ಮಾಡುವ ಹೊತ್ತಿಗೆ ಅರವತ್ತು ಆಮ್ಲೇಟುಗಳು ವಿಲೇವಾರಿಯಾಗುವುದರೊಂದಿಗೆ ಅಕ್ಕಯ್ಯಮ್ಮನ ಮುಖದಲ್ಲಿ ಹೊಸ ಕಳೆ ಹುಟ್ಟಿಕೊಂಡಿತ್ತು. ಅಂಗಡಿ ಶುರುವಾಗಿ ಮೂರನೇ ದಿನ ಭಾನುವಾರ ಅಕ್ಕಯ್ಯಮ್ಮ ಬೆಳಗ್ಗೆನೇ ಫಾರಮ್ಮಿಗೆ ಹೋಗಿ ನೂರೈವತ್ತು ಮೊಟ್ಟೆಗಳನ್ನು ತಂದಿದ್ದಳು. ಪಕ್ಕದ ತಗ್ಗಳ್ಳಿ, ಹನುಮಂತಪುರಗಳಿಂದಲೂ ಹದಿನೈದಿಪ್ಪತ್ತು ಜನ ಬಂದು ಆಮ್ಲೇಟ್ ಖರೀದಿ ಮಾಡಿದ್ದರು. ಭಾನುವಾರ ಅಕ್ಕಯ್ಯಮ್ಮ ಎಂಟು ನೂರು ರೂಪಾಯಿ ಗಲ್ಲಾ ತುಂಬಿಸಿಕೊಂಡಿದ್ದಳು. ಊರ ಪ್ರಮುಖರಾದ ನಾಗರೆಡ್ಡಿ, ದೇವರಾಜ, ಮರೀರಪ್ಪ, ರಾಮಕೃಷ್ಣಯ್ಯ ಮುಂತಾದವರೇ ಅಕ್ಕಯ್ಯಮ್ಮನ ಆಮ್ಲೇಟ್ ರುಚಿ ನೋಡಿ, "ಏಯ್ ಬಿಡ್ರಿ, ಅಕ್ಕಯ್ಯಮ್ಮ ಹೈಕ್ಲಾಸಾಗಿ ಆಮ್ಲೇಟ್ ಮಾಡ್ತಾಳೆ. ಬಾಯಿಗಿಟ್ಕೊಂಡ್ರೆ ಒಳ್ಳೆ ಬೆಣ್ಣೆ ಥರ ಕರ್ಗೋಗ್ತೈತೆ. ತುಮಕೂರು, ಮಧುಗಿರಿನಲ್ಲೂ ಇಂಥ ಆಮ್ಲೇಟ್ ನಾವ್ ತಿಂದಿದ್ದು ಗೆಪ್ತಿ ಇಲ್ಲ." ಎಂದು ಹಾಲುಡೈರಿ ಮುಂದೆಯೇ ಮಾತನಾಡಿದ್ದರು. ಅವರ ಮಾತುಗಳು ಯೂನಿವರ್ಸಿಟಿಯೊಂದು ಅಕ್ಕಯ್ಯಮ್ಮನಿಗೆ ಪಿಎಚ್ಡಿ ಪದವಿಯನ್ನು ಕೊಟ್ಟಂತಿದ್ದವು. ಡೈರಿ ಸೆಕ್ರೇಟರಿ ರಾಮದಾಸಪ್ಪ ಕಣ್ಣಿಗೆ ಬಿದ್ದಾಗಲೆಲ್ಲ ಅಕ್ಕಯ್ಯಮ್ಮ, "ನಿನ್ನ ಕೈಗುಣ ಬಲೊಳ್ಳೆದಣ್ಣಯ್ಯೋ, ಯಾಪಾರ ಚನ್ನಾಗಿ ಕುದ್ರುಕಂಬ್ತಾ ಐತೆ." ಎಂದು ಕೃತಜ್ಞತೆಯ ಮಾತುಗಳನ್ನು ಅರ್ಪಿಸುತ್ತಿದ್ದಳು. ರಾಮದಾಸಪ್ಪ ಪ್ರತಿನಿತ್ಯವೂ ಸಂಜೆಯ ಎಣ್ಣೆಗೆ ಯಾರಾದರೂ ಹುಡುಗರ ಹತ್ತಿರ ಎರಡೆರಡು ಆಮ್ಲೇಟುಗಳನ್ನು ತರಿಸಿಕೊಳ್ಳುತ್ತಿದ್ದ. ರಾಮದಾಸಪ್ಪನಿಗೆ ಎಂದು ಗೊತ್ತಾದರೆ ಅಕ್ಕಯ್ಯಮ್ಮ ಎರಡು ಮೊಟ್ಟೆಗಳ ಬದಲು ಮೂರು ಮೊಟ್ಟೆಗಳನ್ನು ಹಾಕಿ ಎರಡು ಆಮ್ಲೇಟ್ ಹಾಕಿ ಕಳಿಸುತ್ತಿದ್ದಳು. ಆಮ್ಲೇಟ್‌ಗೆ ಈರುಳ್ಳಿ ಬೇಡ ಅಂದೋರಿಗೆ ಉಪ್ಪು, ಕರಿ ಮೆಣಸಿನ ಪುಡಿಯನ್ನು ಹಾಕಿ ಮಾಡಿಕೊಡುತ್ತಿದ್ದಳು. ಹಲ್ಲಿಲ್ಲದ ಮುದುಕರು ಇಂಥ ಆಮ್ಲೇಟನ್ನು ನಾಲಿಗೆಯ ಮೇಲೆ ಹೊರಳಿಸಿ ಹೊರಳಿಸಿ ನುಣ್ಣಗೆ ಮಾಡಿ ನುಂಗುತ್ತಿದ್ದರು.

ಸೋಮವಾರ ಬಿಟ್ಟು ವಾರದ ಇನ್ನುಳಿದ ದಿನಗಳಲ್ಲಿ ಅಕ್ಕಯ್ಯಮ್ಮ ಅಂಗಡಿ ಓಪನ್ ಮಾಡುತ್ತಿದ್ದಳು. ದಿನಗಳು ಸವೆಯುತ್ತಿರುವುದೇ ಅಕ್ಕಯ್ಯಮ್ಮನಿಗೆ ಅರಿವಾಗುತ್ತಿರಲಿಲ್ಲ. ಅಂಗಡಿ ಇಟ್ಟು ತಿಂಗಳಲ್ಲಿ ದಿನದ ಸರಾಸರಿ ವ್ಯಾಪಾರ ಎಂಟು ನೂರು ರೂಪಾಯಿ ಮುಟ್ಟಿತ್ತು. ಅಂದರೆ, ದಿನಕ್ಕೆ ಸರಾಸರಿ ಎಂಬತ್ತು ಆಮ್ಲೇಟುಗಳು ಬಿಕರಿಯಾಗುತ್ತಿದ್ದವು. ಅಂಥ ಒಂದು ದಿನ ಮಧ್ಯಾಹ್ನ ಎರಡು ಗಂಟೆಯ ಹೊತ್ತಿನಲ್ಲಿ ಮೇಡಂ ಸರೋಜಮ್ಮ ಅಂಗನವಾಡಿ ಮುಗಿಸಿಕೊಂಡು ಮನೆಗೆ ಹೋಗುತ್ತಿರಬೇಕಾದರೆ ಅಕ್ಕಯ್ಯಮ್ಮನ ಕೇರಿಯ ಕಡೆಯಿಂದ ತೂರಿ ಬಂದ ಆಮ್ಲೇಟ್ ಘಮಘಮ ವಾಸನೆ ಮೂಗಿನೊಳ್ಳೆಗಳಿಗೆ ನುಗ್ಗಿ ಕಾಲುಗಳನ್ನು ಅಕ್ಕಯ್ಯಮ್ಮನ ಬಾಗಿಲ ಮುಂದಕ್ಕೆ ಎಳೆದುಕೊಂಡು ಬಂದಿತ್ತು. ಅಕ್ಕಯ್ಯಮ್ಮ ಸರೋಜಮ್ಮನಿಗೆ ಚಾಪೆಯನ್ನು ಹಾಸಿದ್ದಳು. ಸರೋಜಮ್ಮ ಚಾಪೆಯ